# 2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ
# ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 514/2022

**ಪಿರ್ಯಾದುದಾರರು** :ತಾವರೆಕೆರೆ ಪೋಲಿಸ್ ಠಾಣೆ

**ವಿರುದ್ಧ**

**ಆರೋಪಿ** : ದಿನೇಶ್ ಎಸ್ ಗೌಡ
ಬಿನ್ ಶಿವಣ್ಣ
ವಯಸು 33 ವರ್ಷ
ವಾಸಃ ಮಂಜುಳ ಮಹಲ್
4 ನೇ ಕ್ರಾಸ್, ಐ. ಟಿ. ಐ ಲೇ ಔಟ್,
ಮಲ್ಲತ್ತಹಳ್ಳಿ, ನಾಗರಬಾವಿ,
ಬೆಂಗಳೂರು ಸಿ.ಟಿ.

## ದೋಷಾರೋಪಣೆ

ಶ್ರೀಮತಿ. ರಂಜಿತ ಜಿ.ಬಿ, 2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮಾಗಡಿ ಆದ ನಾನು ಈ ಮೂಲಕ ಕೆಳಕಂಡಂತೆ ಆಪಾದಿತರಾದ ನಿಮ್ಮ ಮೇಲೆ ಹೊರೆಸುವ ಆಪಾದನೆ.

**ದಿನೇಶ್ ಎಸ್ ಗೌಡ ಎಂಬ ನೀವು,**

ತಾವರೆಕೆರೆ ಪೋಲೀಸ್ ಠಾಣೆಯ ಸರಹದ್ದು, ಬೆಂಗಳೂರು ದಕ್ಷಿಣ ತಾಃ ತಾವರೆಕೆರೆ ಹೋಬಳಿ ದೇವಮಾಚೋಹಳ್ಳಿ ಗ್ರಾಮ ಸರ್ವೆ ನಂ.26/2 ರಲ್ಲಿರುವ ಬೃಂಧಾವನ ನಿವಾನ ಬಡಾವಣೆಯಲ್ಲಿ ಮಾಡಿರುವ ನಿವೇಶನದಲ್ಲಿ ಚಾಸಾ-1 ರವರಿಗೆ ಮಾರಾಟ ಮಾಡಿ ರೂ. 3,40,000/- ಹಣವನ್ನು ಪಡೆದು ದಿ.27-02-2020 ರಂದು ಕ್ರಯದ ಕರಾರುಪತ್ರ ಮಾಡಿಕೊಟ್ಟು, ಸಾಕ್ಷಿ-2 ರವರಿಗೆ ಸದರಿ ನಿವೇಶನದ ಸೈಟ್ ನಂ.72 ನ್ನು ಮಾರಾಟ ಮಾಡಿ ರೂ. 2,20,000/- ಹಣವನ್ನು ಪಡೆದು ದಿನಾಂಕ 20-10-2016 ರಂದು ಕ್ರಯದ ಕರಾರುಪತ್ರ ಮಾಡಿಕೊಟ್ಟು ಚಾಸಾ-3 ರವರಿಗೆ ಸದರಿ ನಿವೇಶನದಲ್ಲಿ ಸೈಟ್ ನಂ. 45 ನ್ನು ಮಾರಾಟ ಮಾಡಿ ರೂ. 4,11,000/-ಗಳನ್ನು ಪಡೆದು ದಿ.28-02-2019 ರಂದು ಕ್ರಯದ ಕರಾರುಪತ್ರ ಮಾಡಿಕೊಟ್ಟಿದ್ದು, ನಂತರ ಚಾಸಾ-1 ರವರಿಗೆ ರೂ.2,50,000/-ಗಳನ್ನು ಚಾಸಾ-2 ರವರಿಗೆ ರೂ 2,00,000 ಗಳನ್ನು ಚಾಸಾ-3 ರವರಿಗೆ ರೂ. 2,50,000/-ಗಳನ್ನು ಆರೋಪಿಯು ವಾಪಸ್ಸು ನೀಡಿದ್ದು, ಚಾಸಾ-1 ರವರಿಗೆ ಇನ್ನೂ 90,000/- ರೂ

ಗಳನ್ನು ಚಾಸಾ-2 ರವರಿಗೆ 20,000/-ರೂ ಗಳನ್ನು ಚಾಸಾ-3 ರವರಿಗೆ 1,61,000/- ರೂ ಗಳನ್ನು ಒಟ್ಟು 2,71,000/- ರೂ ಹಣವನ್ನು ಕೊಡದೇ ಸೈಟುಗಳನ್ನು ಸಹ ರಿಜಿಸ್ಟರ್ ಮಾಡಿಕೊಡದೇ ನಂಬಿಕೆ ದ್ರೋಹ ಮಾಡಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ-406 ರೀತ್ಯ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ಎರಡನೆಯದಾಗಿ, ನೀವು ದೇವಮಾಚೋಹಳ್ಳಿ ಗ್ರಾಮ ಸರ್ವೆ ನಂ.73 ನ್ನು ಚಾಸಾ-1 ರವರಿಗೆ ಮಾರಾಟ ಮಾಡಿ ರೂ. 3,40,000/- ಹಣವನ್ನು ಪಡೆದು ದಿ.27-02-2020 ರಂದು ಕ್ರಯದ ಕರಾರುಪತ್ರ ಮಾಡಿಕೊಟ್ಟು, ಸಾಕ್ಷಿ-2 ರವರಿಗೆ ಸದರಿ ನಿವೇಶನದ ಸೈಟ್ ನಂ.72 ನ್ನು ಮಾರಾಟ ಮಾಡಿ ರೂ. 2,20,000/- ಹಣವನ್ನು ಪಡೆದು ದಿನಾಂಕ 20-10-2016 ರಂದು ಕ್ರಯದ ಕರಾರುಪತ್ರ ಮಾಡಿಕೊಟ್ಟು ಚಾಸಾ-3 ರವರಿಗೆ ಸದರಿ ನಿವೇಶನದಲ್ಲಿ ಸೈಟ್ ನಂ. 45 ನ್ನು ಮಾರಾಟ ಮಾಡಿ ರೂ. 4,11,000/-ಗಳನ್ನು ಪಡೆದು ದಿ.28-02-2019 ರಂದು ಕ್ರಯದ ಕರಾರುಪತ್ರ ಮಾಡಿಕೊಟ್ಟಿದ್ದು, ನಂತರ ಚಾಸಾ-1 ರವರಿಗೆ ರೂ.2,50,000/-ಗಳನ್ನು ಚಾಸಾ-2 ರವರಿಗೆ ರೂ 2,00,000 ಗಳನ್ನು ಚಾಸಾ-3 ರವರಿಗೆ ರೂ. 2,50,000/-ಗಳನ್ನು ಆರೋಪಿಯು ವಾಪಸ್ಸು ನೀಡಿದ್ದು, ಚಾಸಾ-1 ರವರಿಗೆ ಇನ್ನೂ 90,000/- ರೂ ಗಳನ್ನು ಚಾಸಾ-2 ರವರಿಗೆ 20,000/-ರೂ ಗಳನ್ನು ಚಾಸಾ-3 ರವರಿಗೆ 1,61,000/- ರೂ ಗಳನ್ನು ಒಟ್ಟು 2,71,000/- ರೂ ಹಣವನ್ನು ಕೊಡದೇ ಸೈಟುಗಳನ್ನು ಸಹ ರಿಜಿಸ್ಟರ್ ಮಾಡಿಕೊಡದೇ ನಂಬಿಕೆ ದ್ರೋಹ ಮಾಡಿ, ಮೋಸ ಮಾಡಲು ಪ್ರಯತ್ನಿಸಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ-420 ರೀತ್ಯ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

**ಪ್ರಶ್ನೆ-1 ಃ ನಿಮ್ಮ ಮೇಲಿನ ಆಪಾದನೆಯ ಸಾರವನ್ನು ಓದಿ, ವಿವರಿಸಿ ಹೇಳಿದಾಗ ನಿಮಗೆ ಅರ್ಥವಾಯಿತೆ?**

**ಆರೋಪಿರವರ ಉತ್ತರ ಃ**

**ಪ್ರಶ್ನೆ-2 ಃ ನೀವು ನಿಮ್ಮ ತಪ್ಪನ್ನು ಒಪ್ಪುಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೆಂದು ಇಚ್ಚಿಸುವಿವರೋ ?**

**ಆರೋಪಿರವರ ಉತ್ತರ ಃ**

**ಈ ಮೇಲ್ಕಂಡ ಆಪಾದನೆಗಳನ್ನು ನೀವು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುವುದಾಗಿ ಈ ಮೂಲಕ ನ್ಯಾಯಾಲಯದ ವಿಚಾರಣೆಗೆ ಒಳಪಟ್ಟಿರುವುದಾಗಿ ಈ ಮೂಲಕ ನಿರ್ದೇಶಿಸುತ್ತೇನೆ.**

**(ಮೇಲ್ಕಂಡ ಆರೋಪಿತನ ಹೇಳಿಕೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಹೇಳಿ, ಕೇಳಿ ಸರಿ ಇದೆಯೆಂದು ನನ್ನ ಸಮಕ್ಷಮ ದಿನಾಂಕ 20-03-2024 ರಂದು ಸಹಿಯನ್ನು ಮಾಡಿರುತ್ತೇನೆ.)**

**(ರಂಜಿತ ಜಿ.ಬಿ)**
**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಮಾಗಡಿ.**

**ಆರೋಪಿಯ ಸಹಿಃ**